<u>ದಿನಾಂಕಃ 14-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ- ಪ್ರತಿವಾದಿ ಪರಃ ಶ್ರೀ ಹೆಚ್.ಸಿ.ಎನ್. ವಕೀಲರಿಂದಃ-</u>

ಬಾಳೆಹಳ್ಳಿ ಗ್ರಾಮದ ಸರ್ವೆ ನಂ.7 ರ ಆಸ್ತಿ ಪೋಡಾಗಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿಯ ಅಜ್ಜನನ್ನ ನಾನು ನೋಡಿದ್ದೆ ಅವರು ತೀರಿಕೊಂಡ ಕಾಲಕ್ಕೆ ನನಗೆ 20 ವರ್ಷ ವಯಸ್ಸು. 1955 ರಲ್ಲಿ ನನ್ನ ತಂದೆ ಈರಣ್ಣ ಇವರು 3 ನೇ ಪ್ರತಿವಾದಿಯ ಅಜ್ಜ ಸಿದ್ದಪ್ಪ ಇವರಿಗೆ ಸರ್ವೆ ನಂ.7 ರಲ್ಲಿ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ತಂದೆ 20 ಗುಂಟೆ ಆಸ್ತಿ ಮಾರಾಟ ಮಾಡಿದ್ದಾರೆ ಆದರೆ 3 ನೇ ಪ್ರತಿವಾದಿ 1 ಎಕರೆ ಸ್ವಾಧೀನಾನುಭವದಲ್ಲಿ ಇದ್ದಾರೆ ಎನ್ನುತ್ತಾರೆ. ನನ್ನ ತಂದೆ ಮಾರಾಟ ಮಾಡಿರುವ ಆಸ್ತಿಯನ್ನ ಸ್ವಾಧೀನ ವಹಿಸಿಕೊಟ್ಟ ಮೇರೆಗೆ 3 ನೇ ಪ್ರತಿವಾದಿ ಮತ್ತು ಅವರ ಕುಟುಂಬಸ್ಥರು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಅಳತೆ ಮಾಡಿರಲಿಲ್ಲ ಎನ್ನುತ್ತಾರೆ. ನನ್ನ ತಂದೆಯುವರೇ ಆಸ್ತಿಯನ್ನ 3 ನೇ ಪ್ರತಿವಾದಿ ಅಜ್ಜನಿಗೆ ಅಳತೆ ಮಾಡಿ ವಹಿಸಿಕೊಟ್ಟಿದ್ದರು ಎಂದರೆ ಸಾಕ್ಷಿ ಅಳತೆ ಮಾಡಿರಲಿಲ್ಲ ಆದರೆ ಅಂದಾಜಿನಲ್ಲಿ ಕೊಟ್ಟಿದ್ದರು ಎನ್ನುತ್ತಾರೆ. 1955 ರಿಂದ ಇದೂವರೆಗೆ 3 ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುವ ಆಸ್ತಿಯನ್ನ ಅಳತೆ ಮಾಡಿಸಿಲ್ಲ ಎಂದರೆ ಸರಿ. 1955 ರಲ್ಲಿ ಸಿದ್ದಪ್ಪ ಇವರಿಗೆ ವಹಿಸಿಕೊಟ್ಟ ಆಸ್ತಿಯನ್ನ ಅವರ ಜೀವಿತಾವಧಿಯಲ್ಲಿ ಅನುಭವಿಸಿದ್ದರು ಆನಂತರ ಅವರ ಮಗ ಮತ್ತು ತದನಂತರ 3 ನೇ ಪ್ರತಿವಾದಿ ಆಸ್ತಿಯನ್ನ ಅನುಭವಿಸಿಕೊಂಡು

ಬರುತ್ತಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಅಡಿಕೆ ಫಸಲು ಬೆಳೆದು ಅದನ್ನ ಚೇಣಿಗೆ ಕೊಡುತ್ತಾ ಬರುತ್ತಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ಬೋರ್ ತೆಗೆಸಿದ್ದಾಗ ಆಗಲೀ, ಅಡಿಕೆ ಗಿಡ ಬೆಳೆದಾಗಲಾಗಲೀ, ಅದನ್ನ ಚೇಣಿ ಕೊಟ್ಟ ಸಮಯದಲ್ಲಿ ಆಗಲೀ ಯಾವುದೇ ತಕರಾರು ಎತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಆಗಾಗಲೇ ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ಸರ್ವೆ ನಂ.7 ರಲ್ಲಿ ನಾನು 31 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿ ಇದ್ದೇನೆ. ನನಗೆ ಸರ್ವೆ ನಂ.7 ರಲ್ಲಿ 1 ಎಕರೆ 3 ಗುಂಟೆ ಇರಬೇಕಿತ್ತು. ಬಾಕಿ ಜಮೀನು ಯಾರ ಬಳಿ ಇದೆ ಎಂದರೆ ಸಾಕ್ಷಿ  ಉತ್ತರ ದಿಕ್ಕಿನಲ್ಲಿ ಒತ್ತುವರಿಯಾಗಿದ್ದು ಶಿವಪ್ಪ ಈತ 2.8 ಗುಂಟೆ, ಮಲ್ಲಿಕಾರ್ಜುನ 7.8 ಗುಂಟೆ, ಮರುಳಸಿದ್ದಪ್ಪ ಈತ 20 ಗುಂಟೆ ಒತ್ತುವರಿ ಮಾಡಿರುತ್ತಾರೆ ಎನ್ನುತ್ತಾರೆ. ಸರ್ವೆ ನಂ.7 ರ  ನನಗೆ ಸೇರಿದ 1 ಎಕರೆ 3 ಗುಂಟೆ ಜಮೀನಿನ ಚೆಕ್ಕುಬಂಧಿಯಲ್ಲಿ 3 ನೇ ಪ್ರತಿವಾದಿ ಆಸ್ತಿ ಬರುವುದಿಲ್ಲ ಎಂದರೆ ಸಾಕ್ಷಿ ಸರ್ವೆ ನಂ.7 ರಲ್ಲಿ ಅವರ ಜಮೀನು ಇದೆ ಎನ್ನುತ್ತಾರೆ. ಮಲ್ಲಿಕಾರ್ಜುನಪ್ಪ ಈತ 7.8 ಗುಂಟೆ ಒತ್ತುವರಿ ಮಾಡಿರುತ್ತಾರೆ. ಸದರಿಯವರು ಯಾವ ದಿನಾಂಕದಂದು ಒತ್ತುವರಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಎ  ಮತ್ತು ಬಿ ಸ್ವತ್ತಿಗೆ ಬೇರೆ ಬೇರೆ ಚೆಕ್ಕುಬಂಧಿ ಇದೆ. ಈ ದಾವೆ ಹೂಡಲು ನನ್ನ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಿಪಿ-29 ನ್ನ ತಯಾರಿಸಿದ ಅಧಿಕಾರಿಯ ಸಹಿ ಇಲ್ಲ ಎಂದರೆ ಸಾಕ್ಷಿ ಸರ್ವೆ ಮಾಡಿರುತ್ತಾರೆ ಮರುಳಸಿದ್ದಪ್ಪ ಬಿಡಲಿಲ್ಲ ಬಾಕಿಯವರು ಸಹಿ ಮಾಡಿರುತ್ತಾರೆ ಎನ್ನುತ್ತಾರೆ. ಮರುಳಸಿದ್ದಪ್ಪ ಅಳತೆ ಕಾರ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದು ಷರ ಬರೆದುಕೊಂಡು ಹೋಗಿರತ್ತೀರಾ ಎಂದರೆ ಸಾಕ್ಷಿ ನಾನು

ಗಮನಿಸಿರುವುದಿಲ್ಲ ಎನ್ನುತ್ತಾರೆ. ನಿಪಿ-29 ರಲ್ಲಿ ಬಿ.ಎನ್ ಚಂದ್ರಶೇಖರ ಮತ್ತು ಬಿ.ಆರ್.ಚಿದಾನಂದ ಇವರು ಹೆಚ್ಚಿಗೆ ಸ್ವಾಧೀನದಲ್ಲಿ ಇದ್ದಾರೆ ಎಂದು ಬರೆದಿರುತ್ತಾರೆ ಎಂದರೆ ಸರಿ. ಬಿ.ಎನ್ ಚಂದ್ರಶೇಖರ ಮತ್ತು ಬಿ.ಆರ್.ಚಿದಾನಂದ ನನ್ನ ಅಣ್ಣತಮ್ಮಂದಿರು ಎಂದರೆ ಸರಿ. ಸದರಿಯವರನ್ನ ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಮಲ್ಲಿಕಾರ್ಜುನ ಇವರಿಗೆ ಹಿಸ್ಸಾ ಕಾಲಕ್ಕೆ 1 ಎಕರೆ 3 ಗುಂಟೆ ಆಸ್ತಿ ಹಿಸ್ಸೆಯಲ್ಲಿ ಬಂದಿದ್ದು ಸದರಿಯವರು ಬಿ.ಎನ್ ಚಂದ್ರಶೇಖರ ಮತ್ತು ಬಿ.ಆರ್.ಚಿದಾನಂದ ಇವರಿಗೆ ತಲಾ 1 ಗುಂಟೆ ಆಸ್ತಿ ಬಿಟ್ಟುಕೊಟ್ಟಿದ್ದು ಈ ದಾವೆ ಹೂಡಿದ ಕಾಲಕ್ಕೆ ಬಿ.ಎನ್ ಚಂದ್ರಶೇಖರ ಮತ್ತು ಬಿ.ಆರ್.ಚಿದಾನಂದ ಇವರನ್ನ ನನ್ನ ಜೊತೆ ಸೇರಿಕೊಳ್ಳಲು ಕೇಳಿದೆ ಆಗ ಅವರು ತಮಗೆ ಆಸ್ತಿ ಸರಿ ಇರುವುದಾಗಿ ಹೇಳಿದರು ಎನ್ನುತ್ತಾರೆ. ಮಲ್ಲಿಕಾರ್ಜುನ ಇವರು ತಲಾ 1 ಗುಂಟೆ ಆಸ್ತಿಯನ್ನ ಬಿ.ಎನ್ ಚಂದ್ರಶೇಖರ ಮತ್ತು ಬಿ.ಆರ್.ಚಿದಾನಂದ ಇವರಿಗೆ ಬಿಟ್ಟುಕೊಟ್ಟ ಸಂಬಂಧ ಯಾವುದೇ ದಾಖಲೆ ಆಗಿಲ್ಲ. ಮಲ್ಲಿಕಾರ್ಜುನ ಇವರ ಆಸ್ತಿಯ ಯಾವುದೇ ದಿಕ್ಕಿನಲ್ಲಿ ಬಿ.ಎನ್ ಚಂದ್ರಶೇಖರ ಮತ್ತು ಬಿ.ಆರ್.ಚಿದಾನಂದ ಇವರ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪಶ್ಚಿಮ ದಿಕ್ಕಿಗೆ ಅವರ ಆಸ್ತಿ ಇದೆ ಎನ್ನುತ್ತಾರೆ. ಮಲ್ಲಿಕಾರ್ಜುನ ಇವರು ಬಿ.ಎನ್ ಚಂದ್ರಶೇಖರ ಮತ್ತು ಬಿ.ಆರ್.ಚಿದಾನಂದ ಇವರಿಗೆ ತಲಾ ಒಂದೊಂದು ಗುಂಟೆ ಆಸ್ತಿ ಬಿಟ್ಟುಕೊಟ್ಟಿದ್ದರಿಂದ ಮಂಜುನಾಥ ಇವರಿಗೆ ಎರಡು ಗುಂಟೆ ಆಸ್ತಿ ಕಡಿಮೆಯಾಗಿದೆ ಎನ್ನುತ್ತಾರೆ. ಈ ವಿಚಾರವನ್ನ ನಿಮ್ಮ ವಕೀಲರಿಗೆ ಮಾಹಿತಿ ಕೊಟ್ಟರಾ ಎಂದರೆ ಸಾಕ್ಷಿ ಈ ವಿಚಾರವನ್ನ ನನ್ನ ವಕೀಲರಿಗೆ ಹೇಳಿದ್ದೇನೆ ಆದರೆ ವಾದಪತ್ರದಲ್ಲಿ ಬರೆಸಿಲ್ಲ ಎನ್ನುತ್ತಾರೆ. ಈ

ವಿಚಾರವನ್ನ ಸರ್ವೆಯರ್ ಅಳತೆ ಮಾಡಲು ಬಂದಾಗ ಹೇಳಿರುತ್ತೀರಾ ಎಂದರೆ ಸಾಕ್ಷಿ ಅವರಿಗೆ ಈ ವಿಚಾರ ಹೇಳಿದ್ದೇನೆ ಮತ್ತು ಅವರ 1 ಎಕರೆ 3 ಗುಂಟೆ ಆಸ್ತಿಯನ್ನ ಅಳತೆ ಮಾಡಿದರು ಎನ್ನುತ್ತಾರೆ. ನಿಪಿ-29 ರಲ್ಲಿ ಸರ್ವೆಯರ್ ಅದೇ ಪ್ರಕಾರ ತೋರಿಸಿದ್ದಾರೆ. ನನ್ನ ತಂದೆ ಇವರು ಸಿದ್ದಪ್ಪನ ಪರವಾಗಿ 1 ಎಕರೆ ಆಸ್ತಿಯನ್ನ ಅಳತೆ ಮಾಡಿ ಸ್ವಾಧೀನ ವಹಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. 1955 ರಿಂದ 3 ನೇ ಪ್ರತಿವಾದಿ ಕುಟುಂಬದವರು 1 ಎಕರೆ ಆಸ್ತಿಯನ್ನ ಸ್ವಾಧೀನಾನುಭವ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಅವರು ಹೆಚ್ಚುವರಿ ಸ್ವಾಧೀನದಲ್ಲಿ ಇರುವುದು ಪೋಡಿ ಮುಕ್ತ ಅಭಿಯಾನ 2019 ರ ಮುಖಾಂತರ ತಿಳಿಯಿತು ಎನ್ನುತ್ತಾರೆ. 3 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು 1 ಎಕರೆ ಸ್ವಾಧೀನದಲ್ಲಿ ಇರುವುದು ನನಗೆ ಮತ್ತು ನನ್ನ ಕುಟುಂಬದವರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ 1 ಎಕರೆ ಆಸ್ತಿಯಲ್ಲಿ ಮಾವು, ತೆಂಗು, ಅಡಿಕೆ, ಹಲಸು, ಸಿಲ್ವರ್ ಇತ್ಯಾದಿ ಬೆಳೆದು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಅವರಿಗೆ ಅರ್ಧ ಎಕರೆ ಆಸ್ತಿ ಮಾತ್ರ ಸೇರಬೇಕು ಎನ್ನುತ್ತಾರೆ. 3 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇರುವ 1 ಎಕರೆ ಆಸ್ತಿ ಸಂಬಂಧ ಆತನಿಗೆ ಹಕ್ಕು ಅಧಿಕಾರ ಹಿತಾಸಕ್ತಿ ಇದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮರು ಸವಾಲುಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

sd/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

ಓ.ಎಸ್.ನಂಃ 62/2022
ಪಿ.ಡಬ್ಲ್ಯೂಃ 1